3) ಹುಳು ಸಾಕಾಣೆಗೆ ಅನುಕೂಲವಾಗುವಂತೆ 6 ಕಟ್ಟಡಗಳನ್ನು ನಿರ್ಮಿಸಲಾಗಿದೆ.

4) ರೇಷ್ಮೆ ಕೃಷಿ ಕ್ಷೇತ್ರದ ನಿರ್ವಹಣೆಗೆ 8 ಸಿಬ್ಬಂದಿ ಒದಗಿಸಲಾಗಿದೆ.

ಮುಂದಿನ ವರ್ಷದಲ್ಲಿ ಕೆಳಕಂಡ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಎ) 8.0 ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ನಿರ್ವಹಣೆ ಮಾಡಿ 10.00 ಲಕ್ಷ ದ್ವಿತಳಿ ಬಿತ್ತನೆ ಗೂಡುಗಳ ಉತ್ಪಾದನೆ.

ಬಿ) ಸುಧಾರಿತ ಹಿಪ್ಪುನೇರಳೆ ತಳಿಗಳನ್ನು 4.00 ಎಕರೆಗಳಲ್ಲಿ ನಿರ್ವಹಿಸುವುದು ಮತ್ತು 1.00 ಲಕ್ಷ ಸಸಿಗಳನ್ನು ಬೆಳೆಸಿ ರೈತರಿಗೆ ವಿತರಿಸುವುದು.

ಈ) ಇಲ್ಲ. ಇಲಾಖೆಯು ದ್ವಿತಳಿ ಕಾರ್ಯಕ್ರಮ ಹಮ್ಮಿಕೊಂಡು ಈ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಲಿದೆ.

ಉ) ಉದ್ಭವಿಸುವುದಿಲ್ಲ.

2715 (3282) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದಿಂದ ಗದಗವರೆಗೆ ರೈಲ್ವೆ ಗೇಜ್ ಪರಿವರ್ತಿಸುವ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಪ್ರಾರಂಭದಿಂದ ಈವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವರ್ಷವಾರು ಮಂಜೂರು ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಇ) ಇನ್ನೂ ಬಿಡುಗಡೆ ಮಾಡಬೇಕಾದ ಅನುದಾನ ಎಷ್ಟು;

ಈ) ಗೇಜ್ ಪರಿವರ್ತನೆ ಕಾರ್ಯಕ್ಕಾಗಿ ಇನ್ನೂ ತಗುಲಬಹುದಾದ ಅಂದಾಜು ವೆಚ್ಚ ಎಷ್ಟು;

ಉ) ಗೇಜ್ ಪರಿವರ್ತನೆಯನ್ನು ಪೂರ್ತಿಗೊಳಿಸಲು ಹಾಕಿಕೊಂಡಿದ್ದ ಕಾಲಮಿತಿ ಎಷ್ಟು;

ಊ) ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ಗೇಜ್ ಪರಿವರ್ತನೆ ಕಾರ್ಯವನ್ನು ಪೂರ್ತಿಗೊಳಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 1995–96 ರಲ್ಲಿ

ಆ) 2002ನೇ ಏಪ್ರಿಲ್‌ನಿಂದ ಈವರೆಗೆ ಕರ್ನಾಟಕ ಸರ್ಕಾರವು ರೂ.36 ಕೋಟಿಗಳು ಮತ್ತು ಕೇಂದ್ರ ರೈಲ್ವೆಯವರಿಂದ ರೂ.70.60 ಕೋಟಿಗಳು ಬಿಡುಗಡೆಯಾಗಿದೆ.

ಇ) ರೂ.34.60 ಕೋಟಿಗಳು.

ಈ) ದಿನಾಂಕ 12–9–2004 ರಂದು ಇದ್ದಂತೆ 2004–05 ನೇ ಸಾಲಿನ ಕೊನೆವರೆಗೆ ತಗಲಬಹುದಾದ ಅಂದಾಜು ವೆಚ್ಚ ರೂ.8743.45 ಲಕ್ಷಗಳು.

ಉ, ಊ) ಬಿಜಾಪುರದಿಂದ ಬಸವನಬಾಗೇವಾಡಿವರೆಗಿನ ಮಾರ್ಗವನ್ನು 2005ನೇ ಮಾರ್ಚ್ ಹಂತದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಿದೆ.

2716 (3283) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆಯೇ;

ಆ) ಹಾಗಾದಲ್ಲಿ ಗುರುತಿಸಿರುವ ಸ್ಥಳ ಯಾವುದು;

ಇ) ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆಗೆ ವ್ಯವಹರಿಸಿದೆಯೇ;

ಈ) ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ಸರ್ಕಾರ ನಿಲ್ದಾಣ ನಿರ್ಮಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಬಿಜಾಪುರ ತಾಲ್ಲೂಕಿನ ಬಿಜಾಪುರ – ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ಬಳಿ ಅರಕೇರಿ ಗ್ರಾಮದಲ್ಲಿ 450 ಎಕರೆ ಜಮೀನನ್ನು ಹಾಗೂ ಬಿಜಾಪುರ ತಾಲ್ಲೂಕಿನ ಬುರಾನಪುರ ಗ್ರಾಮದ ಸರ್ವೆ ನಂಬರ್ 18 ಮತ್ತು 25ರ 45.01 ಎಕರೆ ವಿಸ್ತೀರ್ಣವನ್ನು ವಿಮಾನ ನಿಲ್ದಾಣ ಸ್ಥಾಪನೆಗೆ ಗುರುತಿಸಲಾಗಿದೆ.